**ದಿನಾಂಕ 20.07.2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಾದ ಶ್ರೀ ಹೆಚ್.ಎಂ.ಆರ್. ವಕೀಲರಿಂದಃ–**

2 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿಃ 20 ಮತ್ತು ನಿಪಿಃ 21 ಅಂತಾ ಗುರುತಿಸಲಾಯಿತು. ಜಾತಿ ಮತ್ತು ಜನ್ಮ ದಿನಾಂಕದ ದೃಢೀಕರಣ ಪತ್ರ ಹಾಜರುಪಡಿಸಿದ್ದು ಅದನ್ನು ನಿಪಿಃ22 ಅಂತಾ, ಸಿ.ಸಿನಂ. 517/2015 ರ ಆದೇಶ ಪತ್ರ , ಪ್ರಥಮ ವರ್ತಮಾನ ವರದಿ , ಪಿರ್ಯಾದಿ , ಸ್ವತ್ತಿನ ಪಟ್ಟಿ , ದೋಷಾರೋಪಣ ಪತ್ರ , ಸ್ಥಳ ಪಂಚನಾಮೆ , ತಪ್ಪೊಪ್ಪಿಗೆ ಪತ್ರ , ದಾವಣಗೆರೆ ಲೋಕಾಯುಕ್ತ ಪೊಲೀಸ್ ಇನ್ಸ್‌ಪೆಕ್ಟರ್ ಅವರ ವರದಿಯ ನಕಲು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿಃ 23 ರಿಂದ ನಿಪಿಃ 30 ಎಂದು ಗುರುತಿಸಲಾಯಿತು. ಬೆರಳಚ್ಚು ತಜ್ಞರ ವರದಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ಪ್ರತಿವಾದಿಗಳ ಪರ ವಕೀಲರ ತಕರಾರಿಗೆ ಒಳಪಟ್ಟು ಅದನ್ನು ನಿಪಿಃ 31 ಎಂದು ಗುರುತಿಸಲಾಯಿತು. ಹೊನ್ನಾಳಿ ಪೊಲೀಸ್ ಠಾಣೆಗೆ ಅಸಲು ಕ್ರಯ ಪತ್ರವನ್ನು ಒದಗಿಸುವ ಕುರಿತು ನೀಡಿದ ಪತ್ರದ ದೃಢೀಕೃತ ನಕಲು ಹಾಜರುಪಡಿಸಿದ್ದು ಅದನ್ನು ನಿಪಿಃ 32 ಅಂತಾ , ದರಕಾಸ್ತು ಅರ್ಜಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿಃ 33 ಅಂತಾ , ಫೋಟೋದ ದೃಢೀಕೃತ ನಕಲು ಹಾಜರುಪಡಿಸಿದ್ದು ಅದನ್ನು ನಿಪಿಃ 34 ಅಂತಾ , ಆಮಂತ್ರಣ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿಃ 35 ಅಂತಾ, 13 ಹೇಳಿಕೆಗಳ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿಃ 36 ರಿಂದ ನಿಪಿಃ 48 ಅಂತಾ ಗುರುತಿಸಲಾಯಿತು. ಫೋಟೋದ ದೃಢೀಕೃತ ನಕಲನ್ನು ಹಾಜರುಪಡದ್ದು ಅದನ್ನು ನಿಪಿಃ 49 ಅಂತಾ , ಕೆಂಚಪ್ಪನ ಮರಣ ಪ್ರಮಾಣ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿಃ 50 ಅಂತಾ , ಹೇಳಿಕೆಯ 2 ದೃಢೀಕೃತ ನಕಲಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿಃ 51 ಮತ್ತು ನಿಪಿಃ 52 ಅಂತಾ ಗುರುತಿಸಲಾಯಿತು. ಆದ್ದರಿಂದ ದಾವೆಯಲ್ಲಿ ಕೇಳಿದಂತೆ ನಮ್ಮ ಪರ ಅದೇಶ ಮಾಡಬೇಕೆಂದು ಪ್ರಾರ್ಥನೆ .

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚುಪಡಿಸಲಾಯಿತು.)

ಓ ಹೇ ಕೇ ಸರಿ ಇದೆ,

ಸಹಿ/–

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ.ಹರಿಹರ

ಸಂಚಾರಿ ಪೀಠ, ಹೊನ್ನಾಳಿ.